ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ,
ಕೆ.ಆರ್.ನಗರ.

ಸಿ.ಸಿ. ನಂ.504/2015

ಫಿರ್ಯಾದುದಾರರುಃ ಕೆ.ಆರ್.ನಗರ ಪೋಲೀಸರು,

ವಿರುದ್ಧ

ಆರೋಪಿ : 1. ಸ್ವಾಮಿಗೌಡ ಬಿನ್ ಬೊಮ್ಮರಾಯಿಗೌಡ,
56 ವರ್ಷ
2. ಸುಕನ್ಯ ಕೋಂ ಸ್ವಾಮಿಗೌಡ, 50 ವರ್ಷ,
3. ಮಂಜುನಾಥ ಬಿನ್ ಸ್ವಾಮಿಗೌಡ, 29 ವರ್ಷ,
ಎಲ್ಲರ ವಾಸಃ ರಾಂಪುರ ಗ್ರಾಮ,
ಕೆ.ಆರ್.ನಗರ ತಾಲ್ಲೂಕು.

## ದೋಷಾರೋಪಣೆ

ಶ್ರೀಮತಿ. ನೂರುನ್ನಿಸಾ, ಬಿ.ಎ., ಎಲ್‌ಎಲ್.ಬಿ, ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ಕೆ.ಆರ್.ನಗರ ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 26-09-2014ರಂದು ಸಂಜೆ 6.30 ಗಂಟೆ ಸಮಯದಲ್ಲಿ ಸಾಲಿಗ್ರಾಮ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೊಳಪಡುವ ರಾಂಪುರ ಗ್ರಾಮದಲ್ಲಿ ಚಾಸಾ-2 ಮತ್ತು 3ರವರು ಹಿತ್ತಲಿಗೆ ಹೋಗಲು ಆರೋಪಿತರಾದ ನಿಮ್ಮ ಮನೆಯ ಮುಂದಿನಿಂದ ನಡೆದುಕೊಂಡು ಹೋಗುವಾಗ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು ಚಾಸಾ-2 ಮತ್ತು 3ರವರನ್ನು ಕುರಿತು ಇಲ್ಲಿ ಏಕೆ ಓಡಾಡುತ್ತೀರಾ, ಎಷ್ಟು ಹೇಳಿದರೂ ಕೇಳುವುದಿಲ್ಲ ಬೋಳಿಮುಂಡೇರಾ ಸೂಳೆಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ತಳ್ಳಾಟ ನೂಕಾಟ ಮಾಡಿ ಕೂಗುತ್ತಿದ್ದಾಗ ಜಗಳ ಬಿಡಿಸಲು ಬಂದ 80 ವರ್ಷದ ಮೃತ ನಿಂಗಮ್ಮ ಕೋಂ ಕೆಂಪೇಗೌಡ ಇವರಿಗೆ 1ನೇ ಆರೋಪಿಯಾದ ನೀವು ಸೂಳೆಮುಂಡೆ ನೀನಾರು ಕೇಳುವುದಕ್ಕೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಇದು ಭಾ.ದಂ.ಸಂ. ಕಲಂ 504 ಸಹವಾಚಕ 34ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು 2ನೇ ಆರೋಪಿಯಾದ ನೀವು ಮೃತ

ನಿಂಗಮ್ಮಳನ್ನು ಕೈಗಳಿಂದ ಗೋಡೆ ಕಡೆಗೆ ದಬ್ಬಿದಾಗ ನಿಂಗಮ್ಮ ಕೆಳಕ್ಕೆ ಕುಸಿದು ಬಿದ್ದು ಅವರ ಎಡತೊಡೆ ಮುರಿದು ತೀವ್ರ ಸ್ವರೂಪದ ಗಾಯವಾಗಿದ್ದು ಇದು ಭಾ.ದಂ.ಸಂ. ಕಲಂ 325 ಸಹವಾಚಕ 34ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು 3ನೇ ಆರೋಪಿಯಾದ ನೀವು ಮೃತ ನಿಂಗಮ್ಮಳ ಊರುಗೋಲು ದೊಣ್ಣೆಯನ್ನು ಎತ್ತಿಕೊಂಡು ಅದರಿಂದ ನಿಂಗಮ್ಮಳ ಎಡಕಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು ಇದು ಭಾ.ದಂ.ಸಂ. ಕಲಂ 324 ಸಹವಾಚಕ 34ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತೀರಿ.

ಕೆ.ಆರ್.ನಗರ,

ದಿನಾಂಕಃ 23-06-2015

(ನೂರುನ್ನಿಸಾ)
ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ.